ಚಾಮರಾಜನಗರ ಜಿಲ್ಲೆಯಲ್ಲಿರುವ ಶಿಕ್ಷಣ ಸಂಸ್ಥೆಗಳು

4663 - ಶ್ರೀ ನಂಜುಂಡಸ್ವಾಮಿ ಜಿ.ಎನ್ (ಕೊಳ್ಳೇಗಾಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಯಲ್ಲಿ ಇರುವ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಎಷ್ಟು?

ಆ) ವಯಸ್ಕರ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಎಷ್ಟು?

ಇ) ಗ್ರಂಥಾಲಯ ಸಂಖ್ಯೆ ಎಷ್ಟು?

ಈ) ಈ ಪೈಕಿ ಯಾವ ಯಾವ ಸಂಸ್ಥೆಯಿಂದ ಯಾವ ಯಾವ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)

ಸರ್ಕಾರಿ	05
ಖಾಸಗಿ	02
ಒಟ್ಟು	**07**

ಆ) ಜಿಲ್ಲಾಮಟ್ಟದಲ್ಲಿ ಜಿಲ್ಲಾ ಸಾಕ್ಷರತಾ ಸಮಿತಿ ಇದೆ.

ಇ)

1. ಶಾಖಾ ಗ್ರಂಥಾಲಯಗಳು	3
2. ಗ್ರಾಮ ಪಂಚಾಯತಿ ಗ್ರಂಥಾಲಯಗಳು	34

ಈ) **ವೃತ್ತಿ ಶಿಕ್ಷಣ ಸಂಸ್ಥೆ :** ಮೇಲಿನ 7 ವೃತ್ತಿ ಶಿಕ್ಷಣ ಪದವಿ ಪೂರ್ವ ಕಾಲೇಜುಗಳಲ್ಲಿ ಒಟ್ಟು 15 ವಿವಿಧ ವೃತ್ತಿಪರ ಶಿಕ್ಷಣ ಕೋರ್ಸುಗಳು ನಡೆಯುತ್ತಿದ್ದು, ಆಯಾ ಕೋರ್ಸಿಗೆ ಅನುಗುಣವಾಗಿ ಪಾಠ, ಪ್ರವಚನಗಳು ನಡೆಯುತ್ತವೆ.

ವಯಸ್ಕರ ಶಿಕ್ಷಣ : ಜಿಲ್ಲಾ ಸಾಕ್ಷರತಾ ಸಮಿತಿಯಿಂದ ಅನಕ್ಷರಸ್ಥರಿಗೆ ಅಕ್ಷರ ಕಲಿಕೆಯನ್ನು ಕನ್ನಡ ನಾಡು, ಸಾಕ್ಷರ ನಾಡು ಕಾರ್ಯಕ್ರಮವನ್ನು ನಿರ್ವಹಿಸಲಾಗಿದೆ.

ಸಾರ್ವಜನಿಕ ಗ್ರಂಥಾಲಯ : ಸಾರ್ವಜನಿಕರಿಗೆ ಗ್ರಂಥಾಲಯ ಸೇವೆ ನೀಡುವ ಸದುದ್ದೇಶದಿಂದ ಜಿಲ್ಲಾ, ತಾಲ್ಲೂಕು, ಗ್ರಂಥಾಲಯಗಳಿಂದ ಸಾರ್ವಜನಿಕ ಓದುಗರಿಗೆ ಸಾಹಿತ್ಯಕ, ಸಾಹಿತ್ಯೇತರ, ಪಠ್ಯಪುಸ್ತಕ ಮುಂತಾದ ಗ್ರಂಥಗಳನ್ನು ಒದಗಿಸುವುದು, ಪತ್ರಿಕೆ, ನಿಯತಕಾಲಿಕೆ ನೀಡುವುದರ ಮೂಲಕ ಜನರಲ್ಲಿ ಓದುವ ಹವ್ಯಾಸ ವೃದ್ಧಿಸಲು ಮಾಹಿತಿಗಳನ್ನು ನೀಡುವುದು.ಇದೇ ರೀತಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಪುಸ್ತಕ, ಪತ್ರಿಕೆ, ನಿಯತಕಾಲಿಕೆಗಳನ್ನು ನೀಡಿ ಉಚಿತ ಗ್ರಂಥಾಲಯ ಸೇವೆ ನೀಡಲಾಗುತ್ತಿದೆ.